<u>ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು</u>

| | | |
|---|---|---|
| ಸಾಕ್ಷಿಯ ಹೆಸರು | :- | ಕೆ ಎಸ್ ಮಲ್ಲೇಗೌಡ |
| ತಂದೆ/ಗಂಡನ ಹೆಸರು | :- | ಸಣ್ಣಮರಿ |
| ವಯಸ್ಸು | :- | 53 ವರ್ಷ |
| ಉದ್ಯೋಗ | :- | ಎಎಸ್ ಐ |
| ವಾಸಸ್ಥಳ | :- | ಬೆಳ್ಳೂರು |

(ಸಾಕ್ಷಿಗೆ ದಿನಾಂಕಃ 08-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

<u>ಮುಖ್ಯ ವಿಚಾರಣೆಃ- ಮಾನ್ಯ ಸಹಾ಼ಯಕ ಸರ್ಕಾರಿ ಅಭಿಯೋಜಕರವರಿಂದ</u>

ನಾನು 2018 ರಿಂದ 2023 ರವರೆಗೆ ಮದ್ದೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 12-09-2015 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ- 20 ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ-1 ರವರ ಗಾಯಾಳುವಿನ ಹೇಳಿಕೆ ಪಡೆದು ಠಾಣೆಗೆ ಹಾಜರುಪಡಿಸಿದ್ದು, ಸ್ವೀಕರಿಸಿ, ಪ್ರಕರಣ ದಾಖಲು ಮಾಡಿ, ಪ್ರ ವವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ- 2 ರ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಈಗ ನಾನು ದಾಖಲಿಸಿದ್ದ ಪ್ರವವರದಿಯನ್ನು ನಿಪಿ-37 ಎಂದು , ಸಾಕ್ಷಿಯ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು.

ದಿಃ 13-09-2018 ರಂದು ಬೆಳಿಗ್ಗೆ 09-30 ರಿಂದ 10.30 ರ ಸಮಯದಲ್ಲಿ ಕೃತ್ಯ ನಡೆದ ಸ್ಥಳವನ್ನು ಚಾಸಾ-1 ರವರು ತೋರಿಸಿದ ಮೇರೆಗೆ ಪಂಚಾಯಿತಿದಾರರಾದ ಚಾಸಾ- 14 ಮತ್ತು 15 ರವರ ಸಮಕ್ಷಮ ನಿಪಿ- 3

ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಮಹಜರ್ ವೇಳೆಯಲ್ಲಿ ಸ್ಕೆಚ್ ತಯಾರಿಸಿದ್ದೇನೆ ಸದರಿಯನ್ನು ನಿಪಿ-38 ಎಂದು ಗುರುತಿಸಲಾಯಿತು. ಮಹಜರ್ ವೇಳೆಯಲ್ಲಿ ಕೆಎ-51-3333 ಖಾಸಗಿ ಬಸ್ಸು ಮತ್ತು ಕೆಎ-09-ಎಫ್ -5180 ಕೆ ಎಸ್ ಆರ್ ಟಿ ಸಿ ಬಸ್ಸನ್ನು, ಕೆಎ-53-ಎಂಸಿ-9999 ಕಾರನ್ನು ಅಮಾನತುಪಡಿಸಿಕೊಂಡಿರುತ್ತೇನೆ. ದಿಃ14-09-2018 ರಂದು ಕೆಎ-09-ಎಫ್ -5180 ಕೆ ಎಸ್ ಆರ್ ಟಿ ಸಿ ಬಸ್ಸನ್ನು ಇಂಡಿಮಿನ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿದ್ದೇನೆ. ಅದೇ ದಿನ ಕೆಎ-53-ಎಂಸಿ-9999 ಕಾರನ್ನು ಇಂಡಿಮಿನ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿದ್ದೇನೆ. 16-09-2018 ರಂದು ಕೆಎ-51-3333 ಖಾಸಗಿ ಬಸ್ಸು ಇಂಡಿಮಿನ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿದ್ದೇನೆ. ಸದರಿ ಇಂಡಿಮಿನ್ನಿಟಿ ಬಾಂಡ್ ನಿಪಿ-39 ಮತ್ತು 40 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-39(ಎ) ಮತ್ತು ನಿಪಿ-40(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ- 2 ರಿಂದ 13 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ- 22 ರವರಿಗೆ ವರ್ಗಾಯಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರವರಿಂದಃ</u>**

ಅಪಘಾತದ ಬಗ್ಗೆ ಚಾಸಾ-1 ರವರು ದೂರು ನೀಡುವ ಪೂರ್ವದಲ್ಲಿ ನಮಗೆ ಬೇರೆ ಯಾವುದೇ ಮಾಹಿತಿ ಬಂದಿರಲಿಲ್ಲ. ಆಸ್ಪತ್ರೆಯಿಂದ ಮೆಮೋ ಬಂದಿತ್ತು. ಚಾಸಾ-1 ರವರು ಗಾಯಾಳು ಎಂದರೆ ಸರಿ. ಅಪಘಾತವೂ ಖಾಸಗಿ ಬಸ್ಸು ಚಾಲಕನಿಂದ ಆಗಿರದೇ ಕೆ ಎಸ್ ಆರ್ ಟಿ ಸಿ ಬಸ್ ಚಾಲಕನಿಂದ ಆಗಿತ್ತು ಎಂದರೆ ಸರಿಯಲ್ಲ. ಗಾಯಾಳುವಿಗೆ ಪರಿಹಾರ ಕೊಡಿಸಬೇಕೆಂದು ಕೆ ಎಸ್ ಆರ್ ಟಿ ಸಿ ಚಾಲಕನ ವಿರುದ್ಧ ದೂರನ್ನು ಸೃಷ್ಟಿ ಮಾಡಿ ಚಾಸಾ-1 ರವರ ಮೂಲಕ ಪಡೆದು ಸುಳ್ಳು ಎಫ್ ಐ ಆರ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ ಮತ್ತು ಸ್ಕೆಚ್

ಮಾಡಿದ್ದಾಗಿ ಸುಳ್ಳು ನುಡಿಯುತ್ತಿದ್ದು ಅದನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ರಿಂದ 13 ರವರಿ ಹೇಳಿಕೆಯನ್ನು ಸಹ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಧ್ಯವಾದಲ್ಲಿ ಗಾಯಾಳುಗಳಿಗೆ ಅನುಕೂಲವಾಗಲೀ ಎಂದು ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು